ಕರ್ನಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳ ಬಗ್ಗೆ

1667 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕದಲ್ಲಿ ಇರುವ ವಿಶ್ವವಿದ್ಯಾನಿಲಯಗಳೆಷ್ಟು?*

ಆ) *ಈ ವಿಶ್ವವಿದ್ಯಾನಿಲಯಗಳಲ್ಲಿ ಸಿಂಡಿಕೇಟ್ ಸೆನೆಟ್, ಅಕಡೆಮಿಕ್ ಕೌನ್ಸಿಲುಗಳು ಇಲ್ಲವೇ?*

ಇ) *ಅವುಗಳಲ್ಲಿ ಯಾವ ಯಾವ ವಿಶ್ವವಿದ್ಯಾನಿಲಯಗಳಿಗೆ ಕಾನೂನಿನ್ವಯ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆಗಳು ನಡೆದಿವೆ ಹಾಗೂ ಯಾವ ಯಾವ ವಿಶ್ವವಿದ್ಯಾನಿಲಯಗಳಲ್ಲಿ ಚುನಾವಣೆಗಳು ನಡೆದಿರುವುದಿಲ್ಲ?*

ಈ) *ನಡೆಯದಿದ್ದಲ್ಲಿ ಎಷ್ಟು ವರ್ಷಗಳಿಂದ ಚುನಾವಣೆ ನಡೆದಿಲ್ಲ?*

ಉ) *ಮೇಲ್ಕಂಡ ಅಂಗ ಸಂಸ್ಥೆಗಳ ಚುನಾವಣೆಗಳು ನಡೆಸುವ ಜವಾಬ್ದಾರಿ ಉಪಕುಲಪತಿಗಳಿಗೆ ಸೇರಿದೆಯೇ ಅಥವಾ ಸರ್ಕಾರದ್ದೆ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ಆರು.

ಆ) ಇರುವುವು.

ಇ) ಬೆಂಗಳೂರು ಒಂದನ್ನು ಹೊರತುಪಡಿಸಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಕಾನೂನಿನನ್ವಯ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆಗಳು ನಡೆದಿವೆ.

ಈ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಮೂರು ವರ್ಷಗಳಿಂದ

ಉ) ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಆಯಾ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು.

ಜಿಲ್ಲಾ ಪರಿಷತ್ತುಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಡಳಿತ.

1139 - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಿಲ್ಲಾ ಪರಿಷತ್ತುಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಡಳಿತವನ್ನು ವಹಿಸಿಕೊಟ್ಟ ಮೇಲೆ ಔಷಧಿ ಸರಬರಾಜು ವೈದ್ಯರು ಮತ್ತು ದಾದಿಯರ ವರ್ಗಾವಣೆಗೆ ಸಂಬಂಧವಾಗಿ ಅನೇಕ ಅವ್ಯವಸ್ಥೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್ತಿನಲ್ಲಿಯೇ ಮುಂದುವರಿಸಿರುವುದರಿಂದ ಯಾವುದೇ ಸುಧಾರಣೆ ಆಗುವುದಿಲ್ಲವೆಂಬುದನ್ನು ಸರ್ಕಾರ ಒಪ್ಪುವುದೇ?*

ಇ) *ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್ತುಗಳಿಂದ ಹಿಂದಕ್ಕೆ ಪಡೆದು ಹೆಚ್ಚಿನ ಪ್ರಗತಿ ಮತ್ತು ಸುಧಾರಣೆಯನ್ನು ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಇಲ್ಲ.